ಶುರುವಾದ ಮೊದಲಿಗೇ ರಂಗ ಮತ್ತು ಆತನ ಅವಸಾನದ ಸ್ಥಿತಿ ನೋಡಿ ಮಮ್ಮಲ ಮರುಗಿ ಫೆರಾರಿಯ ಹುಟ್ಟಿದ ದಿನವೊಂದರ ಸಾರ್ಥಕ ಸವಿನೆನಪಿಗೆಂದು ರಂಗನಿಗೆ ಸೇವಾಕೇಂದ್ರವೊಂದನ್ನು ತೆರೆದುಕೊಟ್ಟರು. ಅಂದಿನಿಂದ ಮೈಮುರಿದು ದುಡಿದರೂ ಅಗೌರವದಿಂದ ಕಾಣುತ್ತಿದ್ದ ಊರೊಳ್ಳೋರು ಕರೆಯುವ ಕೆಲಸಗಳನ್ನು ನಯವಾಗಿ ತ್ಯಜಿಸಿದ. ಅಂಗಡಿಗೆ ಬೇಕಾಗುವ ಸಾಮಾನು ಸರಂಜಾಮು ತಂದು ಹಾಕಲು ಒಂದು ಟಿವಿಎಸ್ ಮಾಡಿಕೊಂಡು ಹಳ್ಳಿಗೂ ನಗರಕ್ಕೂ ಓಡಾಡುತ್ತಿದ್ದರೆ, ಕೊರಳಲ್ಲಿ ಶಿಲುಬೆಯೊಂದು ಸದಾ ಅತ್ತಿಂದಿತ್ತ ವಾಲಾಡುತ್ತಿತ್ತು. ಹೀಗೆ ಬದಲಾದ ರಂಗನನ್ನು ನೋಡುವುದು ಗೌಡರ ಮಗಳು ಸೌಭಾಗ್ಯಳಿಗೆ ಒಂಥರ ಖುಷಿ!

ಇಂಥದ್ದೇ ಬದಲಾದ ಸಂದರ್ಭದಲ್ಲಿ ಆರು ವರ್ಷಕ್ಕೊಮ್ಮೆ ಬರುವ ಸುಂಕಿ ಮಾರಮ್ಮನ ಜಾತ್ರೆಗೆ ಬೆಂಕಿಪುರ ಗ್ರಾಮ ಸಜ್ಜಾಗಿತ್ತು. ಈ ಬಾರಿಯ ವಿಶೇಷವೆಂದರೆ ಸುಂಕಿಮಾರಮ್ಮಳಿಗೆಂದು ಹೊಸದಾಗಿ ಗೋಪುರ ನಿರ್ಮಿಸುವ ಮೂಲಕ, ಮಂಜೇಗೌಡರು ತಾವು ಪಂಚಾಯ್ತಿ ಎಲೆಕ್ಷನ್‌ಗೆ ನಿಲ್ಲುವ ಮುನ್ನ ನೀಡಿದ್ದ ಹರಕೆಯೊಂದನ್ನು ತೀರಿಸಲಿದ್ದರು. ಪ್ರತಿ ಬಾರಿಯ ಸುಂಕಿ ಮಾರಮ್ಮನ ಜಾತ್ರೆಯಲ್ಲಿ ಊರೊಳ್ಳೋರು ಸೀಪು ಮಾಡಿಕೊಂಡರೆ, ಹಟ್ಟಿಗರು ಮೊದಲ ದಿನದ ತೇರು ನೆರವೇರಿದ ಅನಂತರ ಕಡ್ತ ಮಾಡಿಕೊಂಡು ಸಂಭ್ರಮಿಸುತ್ತಿದ್ದರು. ಆದರೆ, ಈ ಬಾರಿ ಹೊಸ ಗೋಪುರ ನಿರ್ಮಾಣ ಕಾರ್ಯ ಕೈಗೊಂಡಿದ್ದರಿಂದ ಹೋಮ ಸುಟ್ಟಿದ್ದರು. ಹೋಮ ಸುಟ್ಟ ನಲವತ್ತೆಂಟು ದಿನ ಯಾವುದೇ ಮಾಂಸಾಹಾರ ಸೇವನೆ ಊರಿನಲ್ಲಿ ನಡೆಯಬಾರದೆಂಬ ಕಟ್ಟಪ್ಪಣೆಯ ಮೇರೆಗೆ ಹಟ್ಟಿಗೂ ಸೇರಿದಂತೆ ತಿನ್ನುಣ್ಣರೆಲ್ಲರಿಗೂ ಮಾಂಸಾಹಾರ ನಿಷೇಧ ಹೇರಲಾಗಿತ್ತು. ಈ ಊರ ಸಹವಾಸ ಅರಿತಿದ್ದ ಕೋಳಿ ಅಂಗಡಿ ಕುಮಾರ ತನ್ನ ಅಂಗಡಿಗೆ ದೀರ್ಘ ರಜೆ ಮಾಡಿ ಇಟ್ಟಿಗೆ ಕೆಲಸಕ್ಕೆ ಹೋಗತೊಡಗಿದ್ದ.

ರಜೆಯ ಮೇಲೆ ಬಂದಿದ್ದ ದಾನಪ್ಪನ ಮಗ ಪ್ರಶಾಂತ ಊರಲ್ಲೇ ಇದ್ದುದರಿಂದ ಊರೊಳ್ಳೋರಿಗೆ ಅನುಕೂಲಕರವಾಗಿರುವ ಸುಂಕಿ ಮಾರಮ್ಮನ ಜಾತ್ರೆಗೆ ಹಟ್ಟಿಗರಾದ ನಾವೆಲ್ಲ ಯಾಕೆ ಬಲಿಯಾಗಬೇಕು ಎಂಬ ತರ್ಕವನ್ನ ಮುನ್ನೆಲೆಗೆ ತಂದಿದ್ದ. ಇದಕ್ಕೆ ಇಂಬುಕೊಡುವಂತೆ ಕಳೆದ ವಾರವಷ್ಟೆ ಹಟ್ಟಿಯ ಮೂರು ವರ್ಷದ ಮಗುವೊಂದು ಆಡಾಡ್ತ ಹೋಗಿ ದೇವಸ್ಥಾನದ ಮೆಟ್ಟಿಲು ಮುಟ್ಟಿತೆಂದು ದಂಡಹಾಕಲು ಯತ್ನಿಸಿದ್ದು ಗಾಯವಾಗಿ ಉಳಿದಿತ್ತು. ಇದೆಲ್ಲಕ್ಕಿಂತ ಮಿಗಿಲಾಗಿ ಹಟ್ಟಿಗರು ನಾವು ಬದುಕಿರುವುದು, ಒಪ್ಪೊತ್ತಿನ ಊಟ ಸಿಗುತ್ತಿರುವುದು ಕರ್ತನಾದ ಏಸುವಿನಿಂದಲೇ ಎಂಬ ಅಭಿಪ್ರಾಯದ ಆಜುಬಾಜಿನಲ್ಲಿದ್ದರು. ಇದರಿಂದ ಸುಂಕಿಮಾರಮ್ಮನ ಜಾತ್ರೆ ನಮಗೇನು ಅಷ್ಟು ಮುಖ್ಯದ್ದಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದರು. 'ನಮ್ಮ ಮಗು ದೇವಸ್ಥಾನದ ಮೆಟ್ಟಿಲು ತುಳಿಯಿತು ಅನ್ನೋ ಕಾರಣಕ್ಕೆ ದಂಡ ಹಾಕೊದಾದ್ರೆ, ನಮ್ಗೆ ಆ ದೇವ್ರೆ ಬೇಡ, ನೀವು ಹೋಮನಾರ ಸುಟ್ಕಳಿ ಏನಾರ ಮಾಡ್ಕಳಿ, ನಿಮ್ಗು ನಮ್ಗು ಸಂಬಂಧ ಇಲ್ಲ' ಎಂದು ಹಟ್ಟಿಗರು ಮೊದಲಬಾರಿಗೆ ಊರ ಸಂಪ್ರದಾಯವನ್ನು ಮುರಿಯಲು ಧೈರ್ಯ ಮಾಡಿದ್ದರು. ಪ್ರಶಾಂತನ ಮಾತಿನಂತೆ ಮಲ್ಲಿಕ ಹಟ್ಟಿಗೆ ಹೊಂದಿಕೊಂಡಂತಿದ್ದ ಬಂಡೆಯ ಮೇಲೆ 'ನಮ್ಮ ಆಹಾರ ನಮ್ಮ ಹಕ್ಕು' ಎಂದು ದೊಡ್ಡ ಅಕ್ಷರದಲ್ಲಿ ಎಲ್ಲರಿಗೂ ಕಾಣುವಂತೆ ಬರೆದು ಬಂದಿದ್ದ.

ಊರಲ್ಲಿ ಹೋಮ ಸುಟ್ಟಿರುವುದು ತಿಳಿದಿದ್ದರೂ ಕ್ರಿಸ್ಮಸ್ ದಿನದಂದು ಬಿರಿಯಾನಿ ಮಾಡಿಕೊಂಡು ತಿಂದಿದ್ದಾರೆ ಎಂಬ ಸುಳಿವರಿತ ಮಂಜೇಗೌಡ ಮತ್ತು ಅವರ ಗ್ಯಾಂಗ್ ಹಟ್ಟಿಗೆ ನುಗ್ಗಿ ಒಬ್ಬೊಬ್ಬರನ್ನೂ ಚಂಡಾಡಿಬಿಡಬೇಕೆನ್ನುವ ಸಿಟ್ಟನ್ನು ಅದುಮಿಟ್ಟುಕೊಂಡು ಹಟ್ಟಿ ಮೊದಲಂಗಿಲ್ಲ, ಅವರು ಕಾನೂನು ಕಟ್ಟಳೆ ಅಂತ ಮಾತಾಡ್ತರೆ, ಮೇಲಾಗಿ ನಮ್ಮ ಮನೆಯ ಕೆಲಸಗಳಿಗೆ ಬರೋದನ್ನ ಬಿಟ್ಟಿರೋದ್ರಿಂದ ಒಂದಿಷ್ಟು ಸಮಾಧಾನದಿಂದ ವರ್ತಿಸಿ

